# ಬೀಟಲ್ಸ್

## ಸಂಗೀತ ಲೋಕದ ಕೋಲ್ಮಿಂಚು

**ಪಟ್ಟ ಪಾಡೆಲ್ಲವನ್ನೂ ಹಾಡಾಗಿಸುವ ಹಟಕ್ಕೆ ಬಿದ್ದವರಂತೆ ಕಾಣಿಸುತ್ತಿದ್ದ 'ಬೀಟಲ್ಸ್' ಟೀಂನ ನಾಲ್ಕು ಹುಡುಗರು ಜಗತ್ತಿನ ಸಂಗೀತ ಲೋಕದಲ್ಲಿ ಹುಟ್ಟಿಸಿದ ಸಂಚಲನ ದೊಡ್ಡದು. ಉರಿವ ಉಲ್ಕೆಗಳಂಥ ಪ್ರಖರ ಪ್ರತಿಭೆಯ ಮೂಲಕವೇ ಜನಪ್ರಿಯತೆ ಮತ್ತು ಸೃಜನಶೀಲತೆ ಎರಡರ ಉತ್ತುಂಗವನ್ನೂ ತಲುಪಿದ ಅವರು ಆ ಉಲ್ಕೆಯ ಉರಿಯನ್ನು ಭರಿಸಲಾಗದೆಯೇ ನಂದಿಹೋಗಿದ್ದೂ ಈಗ ಇತಿಹಾಸ. 'ಬೀಟಲ್ಸ್' ತಂಡದ ಸಂಗೀತಕ್ಕಾಗಿ ಜನರು ಹುಚ್ಚೇಳುತ್ತಿದ್ದ ಪರಿ 'ಬೀಟಲ್‌ಮೇನಿಯಾ' ಎಂದೇ ಜನಜನಿತ. ಆ ತಂಡದ ವೈಭವದ ನೆನಪಿಗೀಗ ಅರವತ್ತು ವರ್ಷ. ಈಗಲೂ ಇಪ್ಪತ್ತರ ಹರೆಯದ ಚುರುಕನ್ನು ಉಳಿಸಿಕೊಂಡಿರುವ ಅವರ ಹಾಡುಗಳ ಮೆಲುಕಿನೊಂದಿಗೆ ಆ ಕಾಲದ ನೆನಪಿನ ಪಲುಕನ್ನೊಮ್ಮೆ ನೇವರಿಸೋಣ ಬನ್ನಿ.**

■ ಆದಿತ್ಯ ಬೀಳೂರು



1963ರಲ್ಲಿ ಇನ್ನೂ ಮೀಸೆ ಚಿಗುರಿರದ ಈ ಹುಡುಗರು... ಸಿಗಾರ್ ಹಿಡಿದುಕೊಂಡಿರುವವನು ಪೌಲ್ ಮೆಕ್ ಕರ್ಟ್ನಿ, ಉಳಿದವರು (ಎಡದಿಂದ ಬಲಕ್ಕೆ) ಡ್ರಮ್ಮರ್ ರಿಂಗೋ ಸ್ಟಾರ್, ಜಾರ್ಜ್ ಹ್ಯಾರಿಸನ್, ಜಾನ್ ಲೆನಾನ್